ಶ್ರೀ ಆರ್. ಶ್ರೀನಿವಾಸ್ (ಪೌರಾಡಳಿತ ಸಚಿವರು) :

ಅ) ದಿನಾಂಕ: 13–5–2002 ರಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಆ) ಗುತ್ತಿಗೆಯನ್ನು ಮೆ : L&T ಲಿಮಿಟೆಡ್, ಇ.ಸಿ.ಸಿ.ವಿಭಾಗ, ಬೆಂಗಳೂರುರವರಿಗೆ ನೀಡಲಾಗಿದೆ.

ಟೆಂಡರ್ ಅವಧಿ ಮಳೆಗಾಲ ಸೇರಿ ಡಿಸೆಂಬರ್ 2003 ರಿಂದ 22 ತಿಂಗಳು ಆಗಿರುತ್ತದೆ.

2005 ಹಾಗೂ 2006ನೇ ಸಾಲಿನ ಮಳೆಗಾಲದಲ್ಲಿ, ಕೃಷ್ಣಾ ನದಿಯ ತೀವ್ರ ಪ್ರವಾಹದಿಂದಾಗಿ ಮೂಲ ಸ್ಥಾವರಕ್ಕೆ ಹೋಗುವ ಮಾರ್ಗ ಕಡಿತಗೊಂಡು, ಕಾಮಗಾರಿಯ ಪ್ರಗತಿ ವಿಳಂಬವಾಗಿದೆ. ಹಲವು ಕಡೆ ಅರಣ್ಯ ಇಲಾಖೆಯ ಜಮೀನಿನಲ್ಲಿ ಕಾಮಗಾರಿ ಕೈಗೊಳ್ಳಲು ವಿಳಂಬವಾಗಿದೆ.

ಇ) ಪ್ರಾಕೃತಿಕ, ತೊಂದರೆಯಿಂದ ಹಾಗೂ ಗುತ್ತಿಗೆದಾರರ ವಿಳಂಬದಿಂದ ಯೋಜನೆಯನ್ನು ಸಕಾಲದಲ್ಲಿ ಕಾರ್ಯಚಾಲನೆ ಮಾಡಲು ಆಗಿರುವುದಿಲ್ಲ. ಇದಕ್ಕೆ ಗುತ್ತಿಗೆದಾರರನ್ನು ಹೊಣೆಗಾರರೆಂದು ಪರಿಗಣಿಸಿ ಈಗಾಗಲೇ ಆರ್.ಎ.ಬಿಲ್‌ಗಳಲ್ಲಿ ಒಟ್ಟು ರೂ.2.00 ಲಕ್ಷಗಳ ದಂಡವನ್ನು ವಿಧಿಸಲಾಗಿದೆ.

ಈ) ಈ ಯೋಜನೆಯನ್ನು ಫೆಬ್ರವರಿ--2008ರ ವೇಳೆಗೆ ಚಾಲನಗೊಳಿಸಲು ಉದ್ದೇಶಿಸಲಾಗಿದೆ.

1359 (1623) ಶ್ರೀ ಸಿದ್ದು ಸವದಿ (ಜಮಖಂಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಇಲಾಖೆಯು ಖಾಸಗಿ ಸಾರಿಗೆಯಂತೆ ಪ್ರಯಾಣಿಕರಿಗೆ ಸೌಲಭ್ಯ ಒದಗಿಸಲು ಇರುವ ತೊಂದರೆಗಳೇನು;

ಆ) ತೊಂದರೆ ಇಲ್ಲವಾದಲ್ಲಿ, ಖಾಸಗಿಯಂತೆ ಸ್ಲೀಪರ್ ಕೋಚ್ ಬಸ್ಸುಗಳನ್ನೇಕೆ ಓಡಿಸುತ್ತಿರುವುದಿಲ್ಲ;

ಇ) ಖಾಸಗಿ ಬಸ್‌ಗಳಲ್ಲಿ ಒಬ್ಬರು ಮತ್ತು ಇಬ್ಬರು ಮಲಗಿ ಪ್ರಯಾಣಿಸುವ ವ್ಯವಸ್ಥೆ ಇದ್ದು ಮತ್ತು ವೇಳೆಗೆ ಸರಿಯಾಗಿ ನಿಗದಿತ ಸ್ಥಳ ತಲುಪಿಸುವ ವ್ಯವಸ್ಥೆ ಇದ್ದು, ಸರ್ಕಾರಿ ಸಾರಿಗೆಯಲ್ಲಿ ಇದೇ ರೀತಿ ಜಾರಿಗೆ ತರದಿರಲು ಕಾರಣಗಳೇನು;

ಈ) ಜನರು ಸರ್ಕಾರಿ ಬಸ್ಸುಗಳಿಗಿಂತಲೂ ಖಾಸಗಿ ಬಸ್ಸುಗಳನ್ನೆ ಯಾಕೆ ಆಯ್ಕೆ ಮಾಡಿಕೊಳ್ಳುವರು;

ಉ) ಈ ಲೋಪಗಳನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಸಾರಿಗೆ ಸಂಸ್ಥೆಗಳು ಖಾಸಗಿ ಸಾರಿಗೆಗಳಿಗಿಂತಲೂ ಉತ್ತಮವಾದ ಸಾರಿಗೆ ಸೌಲಭ್ಯಗಳನ್ನು ಒದಗಿಸುತ್ತಿದೆ.

ಆ)

1) ಕ.ರಾ.ರ.ಸಾ.ಸಂಸ್ಥೆಯು ಪ್ರಸ್ತುತ ಹವಾನಿಯಂತ್ರಿತ 2 ಸ್ಲೀಪರ್ ಹಾಗೂ 4 ಸೆಮಿಸ್ಲೀಪರ್ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುತ್ತಿದೆ.

2) ವಾ.ಕ.ರ.ಸಾ.ಸಂಸ್ಥೆಯು ಬಿಜಾಪುರದಿಂದ ಬೆಂಗಳೂರಿಗೆ ಪ್ರತಿನಿತ್ಯ ರಾತ್ರಿ 8.00 ಘಂಟೆಗೆ ಸ್ಲೀಪರ್ ಕೋಚ್ ಸಾರಿಗೆಯನ್ನು ಕಾರ್ಯಾಚರಣೆ ಮಾಡುತ್ತಿದ್ದು, ಶೀಘ್ರದಲ್ಲಿಯೆ ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿನ ಜಿಲ್ಲಾ ಕೇಂದ್ರ ಮತ್ತು ಪ್ರಮುಖ ನಗರಗಳಿಂದ 50 ನೂತನ ಸ್ಲೀಪರ್ ಕೋಚ್ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.

3) ಈ.ಕ.ರ.ಸಾ.ಸಂಸ್ಥೆಯು ಗುಲ್ಬರ್ಗಾದಿಂದ ಬೆಂಗಳೂರಿಗೆ ಹವಾ ನಿಯಂತ್ರಿತ ಸ್ಲೀಫರ್ ಕೋಚ್‌ನ್ನು ಕಾರ್ಯಾಚರಣೆ ಮಾಡುತ್ತಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ನಿಗದಿತ ವೇಳೆಯಲ್ಲಿ ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸುತ್ತಿವೆ.

ಇ) ಪ್ರಸಕ್ತ ಬಿಜಾಪುರದಿಂದ ಬೆಂಗಳೂರಿಗೆ ಮತ್ತು ಗುಲ್ಬರ್ಗಾದಿಂದ ಬೆಂಗಳೂರಿಗೆ ಇಬ್ಬರು ಮಲಗಲು ಅವಕಾಶವುಳ್ಳ ಎ.ಸಿ.ಸ್ಲೀಪರ್ ಕೋಚ್‌ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಈ) ಪ್ರಯಾಣಿಕರು ಸಾರಿಗೆ ಸಂಸ್ಥೆಗಳ ವಾಹನಗಳಲ್ಲಿ ಪ್ರಯಾಣಿಸಲು ಆಧ್ಯತೆ ನೀಡುತ್ತಿರುತ್ತಾರೆ.

ಉ) ಉದ್ಭವಿಸುವುದಿಲ್ಲ.